**ಸಾಕ್ಷಿಯನ್ನು ದಿಃ *12/06/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ.**

ಕೊಪ್ಪದ ಎಂಟರಪ್ರೆಸ್ಸೆಸ ನನ್ನ ಹೆಂಡತಿಯ ಒಡೆತನದಲ್ಲಿದೆ. ಕೊಪ್ಪದ ಎಂಟರಪ್ರೈಸಸನ್ನು ಸಾಮಾನ್ಯ ಅಧಿಕಾರ ಪತ್ರದಡಿಯಲ್ಲಿ ನಾನೇ ನಡೆಸುತ್ತಿದ್ದೇನೆ. ಸದರಿ ಸಂಸ್ಥೆಯನ್ನು ಫೆಬ್ರುವರಿ 2019 ರಿಂದ ನಡೆಸುತ್ತಿದ್ದೇವೆ. ಸದರಿ ಸಂಸ್ಥೆಯನ್ನು 2018 ರಲ್ಲಿ ನೊಂದಣಿ ಮಾಡಿಸಿದ್ದೇವೆ. ಈ ಕುರಿತಾದ ದಾಖಲೆ ಹಾಜರುಪಡಿಸಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಜಿಎಸಟಿ ನಂಬರ ದಾಖಲಿಸಿದ್ದೇನೆ ಎಂದು ಉತ್ತರಿಸುತ್ತಾರೆ. ನಮ್ಮ ಸಂಸ್ಥೆಯಲ್ಲಿ ಇಬ್ಬರೂ ಕೆಲಸ ಮಾಡುತ್ತಿದ್ದಾರೆ, ಅವರನ್ನು ಮೊದಲಿಗೆ ಸೇಲ್ಸ ಎಕ್ಸಿಕ್ಯೂಟಿವ ಎಂದು ನೇಮಿಸಿಕೊಂಡಿದ್ದೇವು. ಸೇಲ್ಸ ಎಕ್ಸಿಕ್ಯೂಟಿವ ಎಂದು ನೇಮಿಸಿಕೊಳ್ಳುವಾಗ ಸದರಿ ವ್ಯಕ್ತಿಗಳ ವಿದ್ಯಾರ್ಹತೆ ಪರಿಗಣಿಸುವುದಿಲ್ಲ. ಸದರಿ ವ್ಯಕ್ತಿಗಳನ್ನು ನಮ್ಮ ಸಂಸ್ಥಗೆ ಸೇರಿಸಿಕೊಳ್ಳುವಾಗ ಅವರ ರಿಸ್ಯೂಮ ಪಡೆದುಕೊಳ್ಳುತ್ತೇವೆ.

ನ್ಯಾಯಾಲಯದ ಮುಂದಿರುವ ಆರೋಪಿಯ ನೇಮಕಾತಿ ವಿಷಯವಾಗಿ ಅವರ ರಿಸ್ಯೂಮ ಪಡೆದುಕೊಂಡಿಲ್ಲ. ಆರೋಪಿ ರಿಸ್ಯೂಮ ಪಡೆದುಕೊಳ್ಳದೆ ಇರಲು ಕಾರಣವೇನೆಂದು ಕೇಳಿದರೆ ಸಾಕ್ಷಿಯು ಅವರು ಮೊದಲಿನಿಂದಲೂ ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಪಡೆಯಲ್ಲಿಲ್ಲ ಎಂದು ಹೇಳುತ್ತಾರೆ. 2019 ರ ಮಾರ್ಚನಲ್ಲಿ ಆರೋಪಿಯನ್ನು ನಮ್ಮ ಸಂಸ್ಥೆಗೆ ಸೇರಿಸಿಕೊಂಡೆವು. ಆರೋಪಿಯನ್ನು ನಮ್ಮ ಸಂಸ್ಥೆಯಲ್ಲಿ ಸೇಲ್ಸ ಎಕ್ಸಿಕ್ಯೂಟಿವ ಜೊತೆಗೆ ಕ್ಯಾಶ ಕಲೆಕ್ಟರ ಆಗಿ ನೇಮಿಸಿಕೊಂಡೆವು. ಕ್ಯಾಶ ಕಲೆಕ್ಟರ ಆಗಿ ನೇಮಿಸಿಕೊಳ್ಳಲು ಅಂತ ವ್ಯಕ್ತಿಗಳಿಗೆ ಅಕೌಂಟ್ಸ ಬಗ್ಗೆ ಜ್ಞಾನವಿದ್ದರೆ ಮಾತ್ರ ನೇಮಿಸಿಕೊಳ್ಳುತ್ತೇವೆ ಎಂದರೆ ಸರಿ. ಆರೋಪಿಗೆ ಅಕೌಂಟ್ಸ ಬಗ್ಗೆ ಜ್ಞಾನವಿದೆ ಮತ್ತು ಅನುಭವವಿದೆ ಎನ್ನುವುದನ್ನು ನಾನು ತನಿಖೆ ಮಾಡಿದ್ದೇನೆ.

***ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದಿರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.